ಅಸಲು ದಾವಾಃ - 242/2021 ಡಿ.ಡಬ್ಲ್ಯೂ- 2

ದಿನಾಂಕಃ 13.03.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ವಾದಿ ಪರ ಶ್ರೀ.ಜಿ ಎಸ್ ಆರ್ ವಕೀಲರಿಂದ

ನನ್ನ ಗಂಡನ ಕೂಲಿ ಹಣದಿಂದ ಹಾಗೂ 1 ನೇ ಪ್ರತಿವಾದಿಯ ಸಂಬಳ ಹಣದಿಂದ ದಾವಾ ಐಟಂ ನಂಬರ್ 2 ನ್ನು ಖರೀದಿ ಮಾಡಲಾಗಿದೆ ಎಂದು ನಿಡಿ 1 ರ ಕ್ರಯಪತ್ರದಲ್ಲಿ ಒಕ್ಕಣಿಕೆ ಇದೆಯಾ ಎಂದರೆ ಗೊತ್ತಿಲ್ಲ. ನಾವು ಮತ್ತು ವಾದಿಗಳು 50 ವರ್ಷಗಳಿಂದ ಪ್ರತ್ಯೇಕವಾಗಿ ವಾಸವಿದ್ದೇವೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಆ ರೀತಿ ಹಾಜರುಪಡಿಸಲು ಯಾವುದೇ ದಾಖಲಾತಿಗಳು ಸಿಗುವುದಿಲ್ಲ ಎಂದು ನುಡಿಯುತ್ತಾರೆ. ನಾವು 50 ವರ್ಷಗಳಿಂದ ಪ್ರತ್ಯೇಕವಾಗಿ ವಾಸವಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ವಾದಿಯ ಗಂಡ ಮಂಜಪ್ಪರವರು ದಾವಾ ಆಸ್ತಿಯನ್ನು ವಿಭಾಗ ಮಾಡಿಕೊಳ್ಳೋಣ ಎಂದು ನನ್ನ ಗಂಡ ನನ್ನು ಹಾಗೂ ಉಳಿದ ಪ್ರತಿವಾದಿಗಳನ್ನು ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಿದ್ದ ರೀತಿಯಂತೆ ವಿಭಾಗ ಮಾಡಿಕೊಳ್ಳೋಣ ಎಂದು 1 ನೇ ವಾದಿಯ ಗಂಡ ಕೇಳಿಕೊಂಡಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಐಟಂ ನಂ.2 ರ ಆಸ್ತಿಯನ್ನು ಒಟ್ಟು ಕುಟುಂಬದ ಆಸ್ತಿಯಿಂದ ಖರೀದಿ ಮಾಡಿದ್ದರಿಂದ ದಾವಾ ಐಟಂ ನಂ.2 ರ ಆಸ್ತಿ ಯು ಸಹ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾ ಐಟಂ ನಂ.2 ರಲ್ಲಿ ಹಿಸ್ಸೆ ಕೊಡಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ